# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

BRUHAT BANGALURU MAHANAGARA PALIKE
Office of the Commissioner, N.R.Square, Bangaluru – 560 002
**ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560 002**

ಸಂಖ್ಯೆ : ಮುಲೆಅ/ಆಯವ್ಯಯ-2019-20/ಪಿಆರ್/11/2018-19 ದಿನಾಂಕ:12-06-2019

## ಆದೇಶ

**ವಿಷಯ** 2019-20ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನವನ್ನು ಬಳಕೆ ಮಾಡಿ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ**
1. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ವಿಷಯ ಸಂಖ್ಯೆ : ತೆಆಸ್ಥಾಸ/144/2018-19 ದಿನಾಂಕ:13-02-2019 ಮತ್ತು 001/2019-20, ದಿನಾಂಕ:31-05-2019
2. ಪಾಲಿಕೆಯ ಕೌನ್ಸಿಲ್ ಸಭೆಯ ಅನುಮೋದನೆ ವಿಷಯ ಸಂಖ್ಯೆ : 286/2018-19, ದಿನಾಂಕ:23-02-2019
3. ಸರ್ಕಾರದ ಆದೇಶ ಸಂಖ್ಯೆ:ನಅಇ/476/ಎಂ.ಎನ್‌ವೈ/2018 ಭಾಗ-1, ದಿನಾಂಕ:22-05-2019.

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಆಯವ್ಯಯವನ್ನು ಉಲ್ಲೇಖ (3) ರಲ್ಲಿನ ಘನ ಸರ್ಕಾರದ ಆದೇಶದಂತೆ ಒಟ್ಟು ರೂ.11,648.90 ಕೋಟಿಗಳ ಸ್ವೀಕೃತಿ ಮತ್ತು ಆರಂಭಿಕ ಶಿಲ್ಕನ್ನು ಒಳಗೊಂಡಂತೆ ಒಟ್ಟು ರೂ.11,649.37 ಕೋಟಿಗಳ ವೆಚ್ಚಗಳಿಗೆ ಅನುಮೋದಿಸಲಾಗಿರುತ್ತದೆ.

2019-20ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚದ ವಿವರಗಳನ್ನು ಆಯವ್ಯಯ ಪುಸ್ತಕದಲ್ಲಿ ನೀಡಲಾಗಿರುತ್ತದೆ. ಅದರಂತೆ ನಿಗದಿತ ಕಾಲಮಿತಿಯಲ್ಲಿ ಪಾಲಿಕೆಗೆ ಬರಬೇಕಾದ ಎಲ್ಲಾ ಸ್ವೀಕೃತಿಗಳನ್ನು ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳು ಪಾಲಿಕೆಯ ನಿಧಿಗೆ ಜಮಾವಾಗುವಂತೆ ಕ್ರಮವಹಿಸುವುದು.

2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ನೂತನ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಇಲಾಖಾವಾರು ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳು ಆಯಾ ಇಲಾಖೆಗೆ ಒದಗಿಸಿದ ಅನುದಾನದ ಮಿತಿಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸಲು ಕ್ರಮವಹಿಸುವುದು.

**ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಬಳಸಿಕೊಳ್ಳುವ ಮುನ್ನಾ ಅನುಸರಿಸಬೇಕಾದ ಮಾರ್ಗಸೂಚಿಗಳು :**

1. ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಆಯವ್ಯಯದಲ್ಲಿ ಅನುದಾನ ಒದಗಿಸಿದ ಮಾತ್ರಕ್ಕೆ ವೆಚ್ಚ ಭರಿಸಲು ನೀಡಿದ ಅನುಮೋದನೆ ಎಂದು ಪರಿಗಣಿಸತಕ್ಕದ್ದಲ್ಲ. ಅನುದಾನಗಳನ್ನು ಬಳಕೆ ಮಾಡುವ ಮುನ್ನ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಆಡಳಿತಾತ್ಮಕ ಅಧಿಕಾರ ಪ್ರತ್ಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಿಯಮಾನುಸಾರ ಕಾಮಗಾರಿಗಳನ್ನು ಕೈಗೊಳ್ಳುವುದು. ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಿರುವ ಅಂದಾಜು ಮೊತ್ತಗಳನ್ನು, ವೆಚ್ಚ ಮಾಡಲು ನೀಡಿರುವ ಅನುಮೋದನೆ ಎಂದು ಭಾವಿಸುವಂತಿಲ್ಲ, ವೇತನ ಹಾಗೂ ಅನಿವಾರ್ಯ ವೆಚ್ಚಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿ/ಕಾರ್ಯಕ್ರಮಗಳ ವೆಚ್ಚಗಳನ್ನು ಸಕ್ಷಮ ಪ್ರಾಧಿಕಾರದ ಮಂಜೂರಾತಿ ಪಡೆದ ನಂತರವೇ ಕಾಮಗಾರಿ/ಕಾರ್ಯಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸುವುದು.

170
19-6-19

2. ಆಯವ್ಯಯ ಅಂದಾಜು ಅಧಿಕಾರಿಗಳು ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ನೀಡಿದ ಮಾತ್ರಕ್ಕೆ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಆಯವ್ಯಯದಲ್ಲಿ ಪರಿಗಣಿಸಲಾಗಿದೆ ಎಂದು ಪರಿಭಾವಿಸತಕ್ಕದಲ್ಲ. ಅಂತಿಮವಾಗಿ ಆಯವ್ಯಯದಲ್ಲಿ ವೆಚ್ಚಗಳಿಗೆ ಅನುದಾನವನ್ನು ಒದಗಿಸಿರುವ ಮಿತಿಯಲ್ಲಿಯೇ ಕಾರ್ಯಕ್ರಮ ಮತ್ತು ಕಾಮಗಾರಿಗಳಿಗೆ ಕ್ರಿಯಾಯೋಜನೆ ತಯಾರಿಸಿ, ಅನುಷ್ಠಾನಗೊಳಿಸತಕ್ಕದ್ದು.

3. ಚಾಲ್ತಿ ವರ್ಷಕ್ಕೆ ಒದಗಿಸಿರುವ ಅನುದಾನದಲ್ಲಿ ಅವಶ್ಯವಿರುವ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳುವುದು ಹಾಗೂ ಪಾಲಿಕೆಯ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಕಾಮಗಾರಿ/ಕಾರ್ಯಕ್ರಮಗಳಿಗೆ ಪ್ರಥಮ ಆಧ್ಯತೆ ನೀಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ವಲಯ ಮುಖ್ಯ ಅಭಿಯಂತರರು/ಸಂಬಂಧಪಟ್ಟ ಅನುಷ್ಠಾಧಿಕಾರಿಗಳು, ಸ್ಥಳ ಪರಿಶೀಲನೆ ಮಾಡಿ, ಆದ್ಯತೆ ನಿರ್ದರಿಸಿ ಅಂದಾಜುಪಟ್ಟಿ ತಯಾರಿಸಿ, ದೃಢೀಕರಿಸಿ ಆರ್ಥಿಕ ಪ್ರತ್ಯಾಯೋಜನೆಯಂತೆ ಆಡಳಿತಾತ್ಮಕ ಅನುಮೋದನೆಯೊಂದಿಗೆ ನಿರ್ಧಿಷ್ಟ ಲೆಕ್ಕಶೀರ್ಷಿಕೆ ನಮೂದಿಸಿ, ಜಾಬ್ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಯಾವುದೇ ಲೆಕ್ಕಶೀರ್ಷಿಕೆಯಲ್ಲಿ ಅನುದಾನ ಉಳಿಕೆಯಾದಲ್ಲಿ ಮುಂದಿನ ಆರ್ಥಿಕ ವರ್ಷಕ್ಕೆ ಮುಂದುವರಿಸಲು ಅವಕಾಶವಿರುವುದಿಲ್ಲ.

4. 14ನೇ ಹಣಕಾಸು ಆಯೋಗದ ಅಡಿಯಲ್ಲಿ ರೂ.405.50 ಕೋಟಿಗಳ (ಅನುಬಂಧ–1) ಅನುದಾನವನ್ನು ಒದಗಿಸಿದ್ದು, ಅನುಬಂಧದಲ್ಲಿ ವಿವರಿಸಿರುವಂತೆ ಲೆಕ್ಕಶೀರ್ಷಿಕೆ : ಪಿ–3290 14ನೇ ಹಣಕಾಸು ಆಯೋಗ – ವಿದ್ಯುತ್ ಬೀದಿ ದೀಪಗಳ ಅಳವಡಿಕೆ/ನಿರ್ವಹಣೆಯನ್ನು ಹೊರತುಪಡಿಸಿ, ಉಳಿದ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮೀಸಲಿರಿಸಿರುವ ಅನುದಾನಕ್ಕೆ ಕ್ರಿಯಾಯೋಜನೆ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸುವುದು.

5. ಸರ್ಕಾರ ಒದಗಿಸಿರುವ ಅನುದಾನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾಲಿಕೆಯು ತನ್ನ ಸಂಪನ್ಮೂಲಗಳಿಂದ ಹೆಚ್ಚುವರಿಯಾಗಿ ಒದಗಿಸಬೇಕಾದ ಅನುದಾನಕ್ಕೆ ಆಯಾ ಲೆಕ್ಕಶೀರ್ಷಿಕೆಗಳಲ್ಲಿ ಅನುದಾನ ಪರಿಗಣಿಸಲಾಗಿರುತ್ತದೆ ಹಾಗೂ ಈ ಸಂಬಂಧ ಪಾಲಿಕೆ ಭಾಗದ ಅನುದಾನ ಮತ್ತು ವಂತಿಕೆಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ವರ್ಗಾವಣೆ ಮಾಡಿಕೊಂಡು ಪಾವತಿಗೆ ಕ್ರಮವಹಿಸುವುದು. ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಆಯುಕ್ತರ ಅನುಮೋದನೆ ಪಡೆದು, ಅನುದಾನ ವರ್ಗಾವಣೆ ಮಾಡಿಕೊಂಡು ಪಾವತಿಗೆ ಮುಖ್ಯ ಲೆಕ್ಕಾಧಿಕಾರಿಗಳು ಕ್ರಮವಹಿಸುವುದು.

6. ಸರ್ಕಾರ 2018–19, 2019–20 ಮತ್ತು 2020–21ನೇ ಸಾಲಿಗೆ ಮುಖ್ಯಮಂತ್ರಿಗಳ "ನವ ಬೆಂಗಳೂರು ಯೋಜನೆ" ಅಡಿ ಒದಗಿಸಿರುವ ಅನುದಾನದ ವಿವರಗಳನ್ನು ಲೆಕ್ಕಶೀರ್ಷಿಕೆವಾರು ಅನುಬಂಧ–4ರಲ್ಲಿ ಒದಗಿಸಲಾಗಿದ್ದು, ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮುನ್ನಾ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತು ಮತ್ತು ಮಾರ್ಗಸೂಚಿಗಳಂತೆ ಕ್ರಮವಹಿಸಿ, ಜಾಬ್ ಸಂಖ್ಯೆ ಪಡೆದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ್ಯದು ಹಾಗೂ ಸರ್ಕಾರ ಬಿಡುಗಡೆ ಮಾಡುವ ಅನುದಾನಕ್ಕೆ ಅನುಗುಣವಾಗಿ ಜೇಷ್ಠತೆ ಆಧಾರದ ಮೇಲೆ ಪಾವತಿ ಮಾಡಲು ಮುಖ್ಯಲೆಕ್ಕಾಧಿಕಾರಿಗಳು ಕ್ರಮವಹಿಸುವುದು.

7. ಸರ್ಕಾರ ಒದಗಿಸಿರುವ ಅನುದಾನದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.ಗೆ ಸಂಬಂಧಿಸಿದಂತೆ ಮೀಸಲಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸುವುದು.

8. ಪಾಲಿಕೆಯಲ್ಲಿ ಶೇ.24.10 ಯೋಜನೆ/ಕಾರ್ಯಕ್ರಮ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಸರ್ಕಾರದ ಸುತ್ತೋಲೆ ಸಂ:ನಅಇ 20 ಪಿಎಸ್‌ಜಿ 2018, ದಿನಾಂಕ:16–01–2019ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಇರುವ ಪರಿಷ್ಕೃತ ಮಾರ್ಗಸೂಚಿಗಳಂತೆ ಕ್ರಮವಹಿಸುವುದು.

9. ಪಾಲಿಕೆಯಲ್ಲಿ ಅಂಗವಿಕಲರ ಕಲ್ಯಾಣ ಯೋಜನೆ/ಕಾರ್ಯಕ್ರಮ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಸರ್ಕಾರದ ಸುತ್ತೋಲೆ ಸಂ:ನಅಇ 39 ಪಿಎಸ್‌ಜಿ 2015, ದಿನಾಂಕ:09-10-2015ರಲ್ಲಿನ ಮತ್ತು ಸಂ:ನಅಇ 137 ಎಸ್‌ಎಫ್‌ಸಿ 2018, ದಿನಾಂಕ:20-08-2018ರಂತೆ ನಗರ ಸ್ಥಳೀಯ ಸಂಸ್ಥೆಗಳ ಅಂಗವಿಕಲರ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಿಧಿ ವಿನಿಯೋಗದ ಬಗ್ಗೆ ಇರುವ ಮಾರ್ಗಸೂಚಿಗಳಂತೆ ಕ್ರಮವಹಿಸುವುದು.

10. ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮುನ್ನ ರಸ್ತೆ ಮತ್ತು ಚರಂಡಿಯ ಚರಿತ್ರೆಯನ್ನು [Road History] ಕಡ್ಡಾಯವಾಗಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳು ಅಂತರ್ಜಾಲದಲ್ಲಿ ನಮೂದಿಸಲು ಕ್ರಮವಹಿಸುವುದು.

11. ಆಯವ್ಯಯದ ಲೆಕ್ಕಶೀರ್ಷಿಕೆಗಳಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು ಒಂದು ಲೆಕ್ಕಶೀರ್ಷಿಕೆಯಿಂದ ಇನ್ನೊಂದು ಲೆಕ್ಕಶೀರ್ಷಿಕೆಗೆ ಬದಲಾವಣೆ/ ಮರುಹಂಚಿಕೆ ಮಾಡಿ ಕಾಮಗಾರಿ ಸಂಖ್ಯೆ ನೀಡುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಕಡತವನ್ನು **ಮುಖ್ಯಲೆಕ್ಕಾಧಿಕಾರಿಗಳ ವರದಿಯೊಂದಿಗೆ ವಿಶೇಷ ಆಯುಕ್ತರು (ಹಣಕಾಸು)** ರವರ ಮೂಲಕ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಲು ಕಡ್ಡಾಯವಾಗಿ ಕ್ರಮವಹಿಸುವುದು.

12. ವಿವೇಚನೆಗೊಳಪಟ್ಟ ಅನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-0541ರ ತುರ್ತು ಮೀಸಲು ನಿಧಿ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಮಾನ್ಯ ಆಯುಕ್ತರವರ ವಿವೇಚನೆಗೆ ಒಳಪಟ್ಟ ಅನುದಾನವಾಗಿದ್ದು, ಆಯುಕ್ತರವರ ಅನುಮತಿಯಂತೆ ಕ್ರಮವಹಿಸುವುದು.

13. ವಿವೇಚನೆಗೊಳಪಟ್ಟ ಅನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-0190ರ ಪೂಜ್ಯ ಮಹಾಪೌರರು ಆಜ್ಞೆ ಮಾಡುವ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಪೂಜ್ಯ ಮಹಾಪೌರರು ವಿವೇಚನೆಗೆ ಒಳಪಟ್ಟ ಅನುದಾನವಾಗಿದ್ದು, ಪೂಜ್ಯ ಮಹಾಪೌರರು ಅನುಮತಿಸಿದ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಕ್ರಮವಹಿಸುವುದು.

14. ವಿವೇಚನೆಗೊಳಪಟ್ಟ ಅನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-2178 ಮತ್ತು ಪಿ-2573 ರ ಉಪಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಉಪಮಹಾಪೌರರು ವಿವೇಚನೆಗೆ ಒಳಪಟ್ಟ ಅನುದಾನವಾಗಿದ್ದು, ಉಪಮಹಾಪೌರರು ಅನುಮತಿಸಿದ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಕ್ರಮವಹಿಸುವುದು.

15. ವಿವೇಚನೆಗೊಳಪಟ್ಟ ಅನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-2415ರ ಮೀಸಲು ನಿಧಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ವಿವೇಚನೆಗೆ ಒಳಪಟ್ಟ ಅನುದಾನವಾಗಿದ್ದು, ಅಧ್ಯಕ್ಷರು ಅನುಮತಿಸಿದ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಕ್ರಮವಹಿಸುವುದು.

16. ವಿವೇಚನೆಗೊಳಪಟ್ಟ ಅನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ-3075 ರ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಗೆ ಒಳಪಟ್ಟ ಅನುದಾನ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಅನುದಾನವು ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಗೆ ಒಳಪಟ್ಟ ಅನುದಾನವಾಗಿದ್ದು, ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಅನುಮತಿಸಿದ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಕ್ರಮವಹಿಸುವುದು.

17. 2019–20ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ **ಮುಂದುವರೆದ ಕಾಮಗಾರಿ/ ಕಾರ್ಯಕ್ರಮಗಳಿಗೆ** (Spillover works) ಸಂಬಂಧಿಸಿದಂತೆ ಈಗಾಗಲೇ ಆಡಳಿತಾತ್ಮಕ, ತಾಂತ್ರಿಕ ಮತ್ತು ಆರ್ಥಿಕ ಅನುಮೋದನೆ (ಜಾಬ್‌ಕೋಡ್ ಸಂಖ್ಯೆ) ಪಡೆಯಲಾಗಿದ್ದರೂ ಸಹಾ ಎಲ್ಲಾ ಕಾಮಗಾರಿ/ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಿದೆ ಎಂದು ಪರಿಭಾವಿಸತಕ್ಕದ್ದಲ್ಲ.

2019–20ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ **ಮುಂದುವರೆದ ಕಾಮಗಾರಿಗಳಿಗೆ** (Spillover works) ಮೀಸಲಿರಿಸಿರುವ ಅನುದಾನದ ಮಿತಿಯಲ್ಲಿಯೇ ಕಾಮಗಾರಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ಮುಂದುವರೆದ ಕಾಮಗಾರಿ/ಕಾರ್ಯಕ್ರಮಗಳ (Spillover works) ವಿವರಗಳನ್ನು ಪಾಲಿಕೆಯ ಸಂಬಂಧಪಟ್ಟ ಮುಖ್ಯ ಅಭಿಯಂತರರ ಮೂಲಕ ಮಾಹಿತಿಯನ್ನು ಪಡೆದು, ಕ್ರೋಢೀಕರಿಸಿ, ಹಾಲಿ ಚಾಲ್ತಿಯಲ್ಲಿರುವ ಭಾಗಶಃ ಕಾಮಗಾರಿ/ಕಾರ್ಯಕ್ರಮಗಳು ಹಾಗೂ ಅವಶ್ಯಕ/ತುರ್ತು ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡಿ, ಆಯವ್ಯಯದಲ್ಲಿ ***ಮೀಸಲಿರಿಸಿರುವ ಅನುದಾನಕ್ಕೆ ಮಿತಿಗೊಳಿಸಿ,*** ಕ್ರಿಯಾ ಯೋಜನೆಯನ್ನು ಲೆಕ್ಕಶೀರ್ಷಿಕೆವಾರು **ವಿಶೇಷ ಆಯುಕ್ತರು (ಯೋಜನೆ)**ರವರು ತಮ್ಮ ಹಂತದಲ್ಲಿಯೇ ಅನುಮೋದಿಸಿ, ಅದರಂತೆ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವುದು.

18. ಸರ್ಕಾರದ ಆದೇಶ ಸಂ:ನಅಇ 515 ಎಂಎನ್‌ವೈ 2018, ದಿನಾಂಕ:14–11–2018ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ವಾರ್ಷಿಕ ನಿರ್ವಹಣೆ, ಮರು ಡಾಂಬರೀಕರಣ, ಬೃಹತ್ ನೀರುಗಾಲುವೆ ವಾರ್ಷಿಕ ನಿರ್ವಹಣೆ, ಕೆರೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಮಾಡಲು ಅವಶ್ಯಕವಾಗಿರುವ ವೆಚ್ಚಗಳನ್ನು ಪಾಲಿಕೆಯ ಸ್ವಂತ ಸಂಪನ್ಮೂಲಗಳಿಂದ ಭರಿಸಿ, **ಎಸ್ಕ್ರೋ ಖಾತೆ ತೆರೆದು ಪ್ರತ್ಯೇಕವಾಗಿ ನಿರ್ವಹಿಸಲು ಆದೇಶಿಸಿರುವ ಮೇರೆಗೆ** ಹಾಗೂ ನಿರ್ವಹಣೆ ಕಾಮಗಾರಿಗಳ ಹಿತದೃಷ್ಟಿಯಿಂದ 2019–20ನೇ ಸಾಲಿನ ಆಯವ್ಯಯದಲ್ಲಿ ಅನುಬಂಧ–5ರಲ್ಲಿ ವಿವರಿಸಿರುವಂತೆ ಅನುದಾನ ಮೀಸಲಿರಿಸಲಾಗಿದ್ದು, ಅನುದಾನದ ವಿವರಗಳು ಈ ಕೆಳಕಂಡಂತಿವೆ :

| ಕ್ರ ಸಂ. | ಲೆಕ್ಕಶೀರ್ಷಿಕೆ | ಹೆಸರು | ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| 1 | ಪಿ–3726 | ವಾರ್ಡ್ ಮಟ್ಟದ ರಸ್ತೆಗಳ ವಾರ್ಷಿಕ ನಿರ್ವಹಣೆ ಮತ್ತು ಮರು ಡಾಂಬರೀಕರಣ | 279.00 |
| 2 | ಪಿ–3607 | ನಗರದ ಬೃಹತ್ ನೀರುಗಾಲುವೆಗಳ ವಾರ್ಷಿಕ ನಿರ್ವಹಣೆ | 25.00 |
| 3 | ಪಿ–3028 | ಕೆರೆಗಳು ಮತ್ತು ಎಸ್.ಟಿ.ಪಿ. ನಿರ್ವಹಣೆಗೆ | 25.00 |
| 4 | ಪಿ–0300 | ಬೀದಿ ದೀಪಗಳ ನಿರ್ವಹಣೆಗೆ | 62.00 |
| 5 | ಪಿ–1924 | ಮೇಲ್ಸೇತುವೆ ಮತ್ತು ಕೆಳಸೇತುವೆಗಳ ದುರಸ್ತಿ ಮತ್ತು ನಿರ್ವಹಣೆ | 50.00 |
| 6 | ಪಿ–0274 | ಘನತ್ಯಾಜ್ಯ ನಿರ್ವಹಣೆ | 375.00 |
| 7 | ಪಿ–3585 | ಘನತ್ಯಾಜ್ಯ ನಿರ್ವಹಣೆಯ ಹೊರಗುತ್ತಿಗೆ ಪೌರಕಾರ್ಮಿಕರಿಗೆ ನೇರ ವೇತನ ಪಾವತಿ | 375.00 |
| 8 | ಪಿ–2902 | ಆರ್ಟೀರಿಯಲ್ / ಸಬ್ ಆರ್ಟೀರಿಯಲ್ ರಸ್ತೆಗಳನ್ನು 8 ವಲಯಗಳಲ್ಲಿ ರಸ್ತೆ ಮೂಲಭೂತ ಸೌಕರ್ಯ ಯೋಜನಾ ವಲಯದಿಂದ ಅಭಿವೃದ್ಧಿಗೊಳಿಸುವುದು | 142.00 |
| 9 | ಪಿ–3285 | ಪಾಲಿಕೆಯ ಶಾಲಾ–ಕಾಲೇಜುಗಳ ನಿರ್ವಹಣೆ ಮತ್ತು ದುರಸ್ತಿ | 15.00 |
| 10 | ಪಿ–3374 | ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯದ ಉದ್ಯಾನವನಗಳ ನಿರ್ವಹಣೆಗಾಗಿ (ರೂ.8 ಕೋಟಿ ಪ್ರತಿ ವಲಯಕ್ಕೆ) | 24.00 |
| 11 | ಪಿ–3375 | ಹೊಸ ವಲಯಗಳ ಉದ್ಯಾನವನಗಳ ನಿರ್ವಹಣೆ (ರೂ.2 ಕೋಟಿ ಪ್ರತಿ ವಲಯಕ್ಕೆ) | 10.00 |
| | | ಒಟ್ಟು | **1382.00** |

ಆಯವ್ಯಯ ಲೆಕ್ಕಶೀರ್ಷಿಕೆ : ಪಿ-1771 ವಲಯ ಕಾಮಗಾರಿ (ವಾರ್ಡ್‌ವಾರು ನಿರ್ವಹಣೆ ಹಳೆ ವಾರ್ಡ್‌ಗೆ ರೂ.2.00 ಕೋಟಿ ಹಾಗೂ ಹೊಸ ವಾರ್ಡ್‌ಗೆ ರೂ.3.00 ಕೋಟಿ) ಗಳಲ್ಲಿ ಶೇ.60ರಷ್ಟು ಭಾಗವನ್ನು ಅಂದರೆ ರೂ.279.00 ಕೋಟಿಗಳನ್ನು ವಾರ್ಡ್ ಮಟ್ಟದ ರಸ್ತೆಗಳ ವಾರ್ಷಿಕ ನಿರ್ವಹಣೆ ಮತ್ತು ಮರು ಡಾಂಬರೀಕರಣ ಕಾಮಗಾರಿಗೆ ಬಳಸಿಕೊಳ್ಳಲು ಪ್ರತ್ಯೇಕವಾಗಿ ಲೆಕ್ಕಶೀರ್ಷಿಕೆ ಪಿ-3726 ನ್ನು ಸೃಜಿಸಿ, ಮೀಸಲಿರಿಸಲಾಗಿರುತ್ತದೆ. ಉಳಿದ ಶೇ.40 ರಷ್ಟು ಮೊತ್ತವನ್ನು ಅದೇ ಲೆಕ್ಕಶೀರ್ಷಿಕೆಯಲ್ಲಿ ಮುಂದುವರೆಸಲಾಗಿದ್ದು, ಸದರಿ ಲೆಕ್ಕಶೀರ್ಷಿಕೆ ಅಡಿ ನಿರ್ವಹಣೆ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳುವುದು.

ಈಗಾಗಲೇ ಮಳೆಗಾಲವು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ, ಅತೀ ತುರ್ತಾಗಿ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದು ಪಾಲಿಕೆಯ ಹಿತದೃಷ್ಟಿಯಿಂದ ಅವಶ್ಯಕವಾಗಿದ್ದು, ಮೇಲೆ ವಿವರಿಸಿರುವ ಲೆಕ್ಕಶೀರ್ಷಿಕೆಗಳಡಿಯಲ್ಲಿ ಎಸ್ಕ್ರೋ ಖಾತೆಯಡಿಯಲ್ಲಿ ಪಾವತಿ ಮಾಡಲು ಮೀಸಲಿರಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, **ವಿಶೇಷ ಆಯುಕ್ತರು (ಯೋಜನೆ)** ರವರು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ತುರ್ತು ನಿರ್ವಹಣೆ ಕಾಮಗಾರಿಗಳ ವಿವರಗಳನ್ನು ಲೆಕ್ಕಶೀರ್ಷಿಕೆವಾರು ಪಡೆದು (ಲೆಕ್ಕಶೀರ್ಷಿಕೆ : ಪಿ-3726 "ವಾರ್ಡ್ ಮಟ್ಟದ ರಸ್ತೆಗಳ ವಾರ್ಷಿಕ ನಿರ್ವಹಣೆ ಮತ್ತು ಮರು ಡಾಂಬರೀಕರಣ" ಅಡಿ ಮೀಸಲಿರಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಆಯಾ ವಾರ್ಡ್‌ನ ಸದಸ್ಯರು ಸೂಚಿಸಿದ ವಾರ್ಡ್ ಮಟ್ಟದ ರಸ್ತೆಗಳ ತುರ್ತು ನಿರ್ವಹಣೆ ಮತ್ತು ಮರು ಡಾಂಬರೀಕರಣ ಕಾಮಗಾರಿಗಳನ್ನು ಮಾತ್ರ ಪರಿಗಣಿಸುವುದು), ತಮ್ಮ ಹಂತದಲ್ಲಿಯೇ ಕ್ರಿಯಾಯೋಜನೆಯನ್ನು ಅನುಮೋದಿಸುವುದು.

ಆರ್ಥಿಕ ಪ್ರತ್ಯಾಯೋಜನೆಯಂತೆ ಆಡಳಿತಾತ್ಮಕ ಅಧಿಕಾರದ ಮಿತಿಗೊಳಪಟ್ಟು **ವಿಶೇಷ ಆಯುಕ್ತರು (ಯೋಜನೆ)** ರವರು ಅನುಮೋದಿತ ಕ್ರಿಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಿರ್ವಹಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

ಈಗಾಗಲೇ ಮಳೆಗಾಲವು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ, ಅತೀ ತುರ್ತಾಗಿ ನಿರ್ವಹಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಎಸ್ಕ್ರೋ ಖಾತೆಯಲ್ಲಿ ಮೀಸಲಿರಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ವೇಳಾಪಟ್ಟಿಯಂತೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದು.

**2019-20ನೇ ಸಾಲಿನಲ್ಲಿ ಅತೀ ತುರ್ತು ನಿರ್ವಹಣೆ ಕಾಮಗಾರಿಗಳ (ESCROW) ಅನುಷ್ಠಾನ ವೇಳಾಪಟ್ಟಿ**

| ಕ್ರ ಸಂ. | ವಿವರ | ನಿಗಧಿಪಡಿಸಿರುವ ಕೊನೆಯ ದಿನಾಂಕ | ಕ್ರಮ |
|---|---|---|---|
| 1 | ಎಸ್ಕ್ರೋ ಖಾತೆಯಲ್ಲಿ ಮೀಸಲಿರಿಸಿರುವ ನಿರ್ವಹಣೆ ಕಾಮಗಾರಿಗಳಿಗೆ ಕ್ರಿಯಾಯೋಜನೆ ತಯಾರಿಸಿ, ಅನುಮೋದಿಸುವುದು. | ದಿನಾಂಕ:29-06-2019 | ವಿಶೇಷ ಆಯುಕ್ತರು (ಯೋಜನೆ) |
| 2 | ಅನುಮೋದಿತ ಕ್ರಿಯಾಯೋಜನೆಯಂತೆ ಜಾಬ್ ಸಂಖ್ಯೆ ಪಡೆದು, ಟೆಂಡರ್ ಕರೆಯಲು ಕ್ರಮವಹಿಸುವುದು. | ದಿನಾಂಕ:08-07-2019 | ಸಂಬಂಧಪಟ್ಟ ಮುಖ್ಯ ಅಭಿಯಂತರರು |
| 3 | ಟೆಂಡರ್‌ಗಳನ್ನು ಅಂತಿಮಗೊಳಿಸಿ, ಕಾರ್ಯಾದೇಶ ನೀಡುವುದು. | ದಿನಾಂಕ:22-07-2019 | ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು |
| 4 | ಎಸ್ಕ್ರೋ ಖಾತೆಯಲ್ಲಿ ಮೀಸಲಿರಿಸಿರುವ ನಿರ್ವಹಣೆ ಕಾಮಗಾರಿಗಳ ಬಿಲ್ಲುಗಳನ್ನು ಜೇಷ್ಠತೆ ಆಧಾರದ ಮೇಲೆ ಪಾವತಿ ಮಾಡಲು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಪ್ರತ್ಯೇಕ ಎಸ್ಕ್ರೋ ಕ್ಯಾಟಗರಿಗಳನ್ನು ಸೃಜಿಸಿ, ಪಾವತಿಗೆ ಕ್ರಮವಹಿಸುವುದು. | ದಿನಾಂಕ:29-06-2019 | ಮುಖ್ಯ ಲೆಕ್ಕಾಧಿಕಾರಿಗಳು |

19. ಸರ್ಕಾರದ ಆದೇಶ ಸಂ:ನಅಇ 124 ಟಿಎಂಎಸ್ 2012, ದಿನಾಂಕ:18-05-2015 ಮತ್ತು ಸರ್ಕಾರದ ಪತ್ರ ಸಂ:ನಅಇ 124 ಟಿಎಂಎಸ್ 2012, ದಿನಾಂಕ:22-08-2016ರಂತೆ ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿಯಡಿಯಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ರಾಜ್ಯದ ನಗರ

ಸ್ಥಳೀಯ ಸಂಸ್ಥೆಗಳಲ್ಲಿನ ಹೊರಗುತ್ತಿಗೆ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ ವೇತನ ನೀಡಲು ಎಸ್ಕ್ರೋ ಖಾತೆಯನ್ನು ತೆರೆದು ನಿರ್ವಹಿಸಲು ಸೂಚಿಸಿರುವಂತೆ 2019-20ನೇ ಸಾಲಿನ ಆಯವ್ಯಯದಲ್ಲಿ SFC (Untied) ಅಡಿಯಲ್ಲಿ ಬಿಡುಗಡೆಯಾಗುವ ಅನುದಾನವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲು ಸಂಪೂರ್ಣ ಮೊತ್ತವನ್ನು ಮೀಸಲಿರಿಸಲಾಗಿದ್ದು, ಅದರಂತೆ ಮುಖ್ಯಲೆಕ್ಕಾಧಿಕಾರಿಗಳು ಪಾವತಿಗೆ ಕ್ರಮವಹಿಸುವುದು.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳಂತೆ ಕ್ರಮವಹಿಸಿ, 2019-20ನೇ ಸಾಲಿನ ಆಯವ್ಯಯದಲ್ಲಿನ ಕಾರ್ಯಕ್ರಮ/ಕಾಮಗಾರಿಗಳ ಅನುಷ್ಠಾನ ಮಾಡಿ, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಪ್ರತಿ ತಿಂಗಳ 25 ರಂದು ಇಲಾಖೆಯ ಪ್ರಗತಿ ಪರಿಶೀಲನಾ ಸಭೆ (MPIC) ನಡೆಸಿ, ತೆಗೆದುಕೊಂಡಿರುವ ಕ್ರಮಗಳ ವರದಿಯನ್ನು ಸಂಬಂಧಪಟ್ಟ ವಿಶೇಷ ಆಯುಕ್ತರವರ ಮೂಲಕ ಆಯುಕ್ತರವರಿಗೆ ಪ್ರತಿ ತಿಂಗಳು 28ರೊಳಗೆ ಸಲ್ಲಿಸಲು ಸೂಚಿಸಿ ಆದೇಶಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:

1. ಪೂಜ್ಯ ಮಹಾಪೌರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಉಪಮಹಾಪೌರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಕಲ್ಯಾಣ)ರವರ ಮಾಹಿತಿಗಾಗಿ ಕಳುಹಿಸಿದೆ.
4. ಅಪರ ಆಯುಕ್ತರು (ಆಡಳಿತ)ರವರ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ಆಯುಕ್ತರು (ಆರೋಗ್ಯ & ಘನತ್ಯಾಜ್ಯ ವಸ್ತು ನಿರ್ವಹಣೆ) ರವರಿಗೆ ಮಾಹಿತಿಗಾಗಿ,
6. ಅಪರ/ಜಂಟಿ ಆಯುಕ್ತರು, ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಪಾಲಿಕೆಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8. ಉಪ ಆಯುಕ್ತರು (ಆಡಳಿತ/ಕಂದಾಯ/ಆಸ್ತಿಗಳು/ಕಲ್ಯಾಣ) ರವರಿಗೆ ಮುಂದಿನ ಕ್ರಮಕ್ಕಾಗಿ
9. ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳ ಅವಗಾಹನೆಗೆ ತರಲು ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸಿದೆ.
10. ಪ್ರಧಾನ ಅಭಿಯಂತರರು, ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಆರ್ಥಿಕ ಅಧಿಕಾರಿಗಳು (ಜೆನರ್ಮ್) ರವರಿಗೆ ಸೂಕ್ತ ಕ್ರಮಕ್ಕಾಗಿ
12. ಮುಖ್ಯ ಆರೋಗ್ಯಾಧಿಕಾರಿಗಳು ರವರಿಗೆ ಮುಂದಿನ ಕ್ರಮಕ್ಕಾಗಿ
13. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯರವರಿಗೆ ಮುಂದಿನ ಕ್ರಮಕ್ಕಾಗಿ
14. ಪಾಲಿಕೆಯ ಎಲ್ಲಾ ವಲಯದ ಮುಖ್ಯ ಅಭಿಯಂತರರು/ ಎಲ್ಲಾ ಕಾ.ಪಾ.ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ
15. ವಲಯ ಉಪ ನಿಯಂತ್ರಕರು (ಹಣಕಾಸು), ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
16. ಜಂಟಿ ನಿರ್ದೇಶಕರು, ತೋಟಗಾರಿಕೆ/ಪಶುಸಂಗೋಪನೆ/ಅಂಕಿ ಅಂಶಗಳುರವರಿಗೆ ಮಾಹಿತಿಗಾಗಿ
17. ತೋಟಗಾರಿಕೆ ಅಧೀಕ್ಷಕರು ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
18. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ರವರಿಗೆ ಮುಂದಿನ ಕ್ರಮಕ್ಕಾಗಿ,
19. ಮಾಹಿತಿ ತಂತ್ರಜ್ಞಾನ ಸಲಹೆಗಾರರು ಪಾಲಿಕೆಯ 2019-20ನೇ ಸಾಲಿನ ಆಯವ್ಯಯ, ಭಾಷಣವನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸಲು ಸೂಚಿಸಿದೆ.
20. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.